VIJAY KARNATAKA - 7th Sept 2013

# ಗಾಲ್ಫ್: ತ್ರಿಶೂಲ್ ಚಾಂಪಿಯನ್

**ಪಿಟಿಐ** ಹೊಸದಿಲ್ಲಿ

ಅಂತಿಮ ದಿನದಲ್ಲಿ ಅತ್ಯಂತ ರೋಚಕವಾಗಿ ನಡೆದ ಹೋರಾಟದಲ್ಲಿ ಜಯಗಳಿಸಿದ ಕೊಡಗಿನ ತ್ರಿಶೂಲ್ ಚಿಣ್ಣಪ್ಪ ಅವರು ಟಾಟಾ ಸ್ಟೀಲ್ ಸದರ್ನ್ ಇಂಡಿಯಾ ಅಮೆಚೂರ್ ಗಾಲ್ಫ್ ಚಾಂಪಿಯನ್‌ಷಿಪ್ ಪ್ರಶಸ್ತಿ ಗೆದ್ದುಕೊಂಡಿದ್ದಾರೆ.

ಅಂತಿಮ ಸುತ್ತಿನಲ್ಲಿ ನಾಲ್ಕು ಶಾಟ್ಸ್ ಮುನ್ನಡೆ ಕಂಡಿದ್ದ ತ್ರಿಶೂಲ್, 4 ಪಾರ್ 76 ಮೂಲಕ ಮುನ್ನಡೆಯನ್ನು ಕಾಯ್ದುಕೊಂಡು ಚೊಚ್ಚಲ ಪ್ರಶಸ್ತಿ ತಮ್ಮದಾಗಿಸಿಕೊಂಡರು.

ದಿಲ್ಲಿಯ ಅಂಕುರ್ ಛೆಡ್ಡಾ ಅವರು ಚಾಂಪಿಯನ್ ತ್ರಿಶೂಲ್ ಅವರಿಗಿಂತ 9 ಶಾಟ್ಸ್‌ನಿಂದ



ಹಿಂದಿದ್ದರು. 16ನೇ ಹೋಲ್‌ನಲ್ಲಿ ತ್ರಿಶೂಲ್ ಯಶಸ್ಸು ಕಂಡರು. ಆದರ ಪರಿಣಾಮ ಪ್ಲೇಆಫ್ ಸ್ಥಿತಿ ನಿರ್ಮಾಣವಾಗಲಿಲ್ಲ.

19 ವರ್ಷದ ತ್ರಿಶೂಲ್, ಚಾಂಪಿಯನ್‌ಷಿಪ್‌ನಲ್ಲಿ 4 ಅಂಡರ್ 284 ಸ್ಕೋರ್‌ನೊಂದಿಗೆ ಅಗ್ರಸ್ಥಾನಕ್ಕೇರಿದರು. ಅಂಕುರ್ ಎರಡನೇ ಸ್ಥಾನಕ್ಕೆ ತೃಪ್ತಿಪಟ್ಟರು. 4 ಶಾಟ್ಸ್ ಹಿನ್ನಡೆ ಕಂಡಿದ್ದ ಬೆಂಗಳೂರಿನ ಉದಯನ್ ಮಾನೆ ಕೊನೆಯ ದಿನದಲ್ಲಿ ಮಿಂಚುವಲ್ಲಿ ಸಫಲರಾದರು.